ಗಂಟೆಯ ಹೊತ್ತಿನಲ್ಲಿ ಸಿಗರೇಟು ಸೇದುತ್ತಾ, ಬೆರಗಿನಿಂದ ಸುತ್ತಲನ್ನು ನೋಡುತ್ತಾ, ಕುತೂಹಲದ ಹೆಜ್ಜೆಗಳನ್ನಿಡುತ್ತಾ, ಕೆರೆ ದಂಡೆಯ ಮೇಲೆ ನಡೆದದ್ದನ್ನು ಕಂಡಿದ್ದೇನೆ, ಕೆರೆ ದಡದ ಮೇಲಿರುವ ಕಲ್ಲುಬೆಂಚಿನ ಮೇಲೆ ಕುಳಿತು ಹಲವಾರು ಕವನಗಳನ್ನು ಬರೆದಿದ್ದೇನೆ, ಮನಸ್ಸಿಗೆ ಬೇಸರವಾದಾಗ ಇಲ್ಲಿನ ಕಲ್ಲು ಬೆಂಚಿನ ಮೇಲೆ ಕುಳಿತು ಕಣ್ಣು ತುಂಬಿಕೊಂಡಿದ್ದೇನೆ, ಸಂತೋಷವಾದಾಗ ಆನಂದ ತುಂದಿಲನಾಗಿದ್ದೇನೆ, ಪರಿಸರ ಪ್ರೇಮಿಯಾಗಿದ್ದ ಹಿರಿಯ ಚೇತನ ಹೇಮಚಂದ್ರ ಅಕ್ಕಿ ಮತ್ತು ನಾನು ಇಬ್ಬರೂ ಕೂಡಿಕೊಂಡು ಬೇಸಿಗೆ ಕಾಲದಲ್ಲಿ ಸಣ್ಣಪುಟ್ಟ ಗಿಡಗಳಿಗೆ ನೀರು ಉಣಿಸಿದ್ದೇವೆ, ಬೇವು ಮತ್ತು ಹೊಂಗೆ ಬೀಜಗಳನ್ನು ಬೇರೆಡೆಯಿಂದ ಆರಿಸಿ ತಂದು, ಬಯಲು ಪ್ರದೇಶದಲ್ಲಿ ಗುಳಿ ತೋಡಿ ಬಿತ್ತಿದ್ದೇವೆ, ಕೆರೆಯ ಪೂರ್ವ ಭಾಗದಲ್ಲಿ ಸರ್ಕಾರಿ ಕಚೇರಿಯ ಕಟ್ಟಡವೊಂದನ್ನು ಕಟ್ಟಬೇಕೆಂದು ಯೋಜಿಸಿದಾಗ, ಅದರ ವಿರುದ್ಧ ಪರಿಸರವಾದಿಗಳು ಮತ್ತು ನಾಗರಿಕರು ನಡೆಸಿದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದೇನೆ (ಕಟ್ಟಡ ನಿರ್ಮಾಣವನ್ನು ತಡೆಯುವಲ್ಲಿ ಆ ಪ್ರತಿಭಟನೆ ಯಶಸ್ವಿಯಾಯಿತು), ಕೆರೆ ದಂಡೆಯ ಮೇಲೆ ತಂತಿ ಬೇಲಿ ಹಾಕುವುದು ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಕೆಲವೊಂದು ಅವಿವೇಕದ ಕಾಮಗಾರಿ ನಡೆಯುವುದನ್ನು ತಡೆಯುವಲ್ಲಿ ನಡೆದ ಪ್ರತಿಭಟನೆಗಳಲ್ಲಿ ಭಾಗಿಯಾಗಿದ್ದೇನೆ ಮತ್ತು ಅವು ಮಿಶ್ರಿತ ಫಲವನ್ನು ಕೊಟ್ಟಿವೆ. ಹೀಗೆ, ಕೆರೆಯೊಂದಿಗೆ ಅನೂಚಾನವಾಗಿ ಬೆಳೆದುಕೊಂಡು ಬಂದಿರುವ ನನಗೆ ಅದೊಂದು ರೀತಿಯಲ್ಲಿ ಆತ್ಮೀಯ ಗೆಳೆಯನೇ ಆಗಿಹೋಗಿದೆ ಎಂದು ಹೇಳಬಹುದು.

**1957.** ಆಗ, ನಾನು ಮೈಸೂರಿನ ಹಾರ್ಡ್ವಿಕ್ ಮಿಡ್ಲ್ ಸ್ಕೂಲಿನ ಏಳನೆಯ ತರಗತಿಯಲ್ಲಿ ಓದುತ್ತಿದ್ದೆ. ಓದಿನ ಜೊತೆಗೆ ಫುಟ್‌ಬಾಲ್ ಆಟ ನನಗೆ ಬಲು ಪ್ರಿಯವಾಗಿತ್ತು ಮತ್ತು ನಾನು ಅದನ್ನು ಅನಂತವಾಗಿ ಆಡುತ್ತಾ ಸಂತೋಷ ಪಡುತ್ತಿದ್ದೆ. ಫುಟ್‌ಬಾಲ್ ಆಟ ಆಡಲಾಗದಿದ್ದರೂ ನೋಡುವುದೆಂದರೆ ಮಾಮೂಲಿ ಪದದಲ್ಲಿ ಹೇಳುವುದಾದರೆ ಈಗಲೂ ಪಂಚಪ್ರಾಣ. ಅದು ಪೌರುಷತ್ವದ ಆಟ ಎಂದೇ ನನ್ನ ಈಗಿನ ನಂಬಿಕೆ ಕೂಡ. ಕ್ರಿಕೆಟ್ಟಿನ ಆಟದಂತೆ ಜಡ ಆಟವಲ್ಲ. ಚೈತನ್ಯದಾಯಕ ಆಟ. ಆ ದಿನಗಳಲ್ಲಿ ನನಗಿದ್ದ ಫುಟ್‌ಬಾಲ್ ಆಟದ ಗೆಳೆಯರು ಹಲವಾರು ಮಂದಿ. ತರಗತಿಯ ಗೆಳೆಯರಾದ ಸ್ಯಾಮುಯಲ್ ಗುರುದಾಸ್ ಉರುಫ್ ಬಸರಿ, ಎಸ್.ವಿ. ಕುಮಾರ್, ಪೌಲ, ಬಾಲರಾಜ್, ನವನೀತ ಈ ಮುಂತಾದವರು. ಅದರಲ್ಲೂ ಗುರುದಾಸ್ ಮತ್ತು ನಾನು ಎಡೆಬಿಡದ ಗೆಳೆಯರಾಗಿದ್ದೆವು. ಗುರುದಾಸ್ ಹೊಟ್ಟೆ ಕೊಂಚ ಮುಂದೆ ಬಂದಿದ್ದರೂ ಆಟದಲ್ಲಿ ಚಾಣಾಕ್ಷನಾಗಿದ್ದ. ನಾನು ಅತ್ಯುತ್ತಮ ಆಟಗಾರನಲ್ಲದಿದ್ದರೂ ಆಟದಲ್ಲಿದ್ದ ನನ್ನ ಹುಮ್ಮಸ್ಸು ಎಂದೂ ಕುಂದುತ್ತಿರಲಿಲ್ಲ. ಆ ವರ್ಷದ ರಾಜ್ಯಮಟ್ಟದ ದಸರಾ ಕ್ರೀಡಾಕೂಟ ಎಂದಿನಂತೆ ಮೈಸೂರು ಮಹಾರಾಜ ಕಾಲೇಜು ಮತ್ತು ಯುವರಾಜ ಕಾಲೇಜಿನ ಮೈದಾನದಲ್ಲಿ ನಡೆಯುವುದೆಂದು ತಿಳಿದುಬಂತು. ಅದರಲ್ಲಿ ಫುಟ್‌ಬಾಲ್ ಆಟವೂ ಸೇರಿದೆ ಎಂದು ತಿಳಿದು ಸಹಜವಾಗೇ ನನಗೂ ಗುರುದಾಸ್‌ಗೂ ಖುಷಿಯಾಯಿತು. ಅಲ್ಲಿಗೆ ಹೋಗುವುದೆಂದು ನಾವಿಬ್ಬರು ತೀರ್ಮಾನಿಸಿದೆವು. ಆಗ ಶಾಲೆಗೆ ದಸರಾ ರಜೆ ಇತ್ತು. ಆ ದಿನ ಬೆಳಗ್ಗೆ ಬೇಗ ಎದ್ದು, ಎನ್.ಐ.ಇ. ಕಾಲೇಜಿನ ನಮ್ಮ ಮನೆಯಿಂದ ಗುರುದಾಸ್ ಮನೆಗೆ ಏಳು ಗಂಟೆಗೆಲ್ಲ ತಲುಪಿ, ಅಲ್ಲಿಂದ ಇಬ್ಬರೂ ಕೂಡಿ ದಸರಾ ಕ್ರೀಡಾಕೂಟದತ್ತ ನಡೆದೆವು. ಆಗ ನಮ್ಮಿಬ್ಬರ ಜೇಬಿನಲ್ಲೂ ಒಟ್ಟಾರೆ ನಾಲ್ಕು ಆಣೆ ಇತ್ತೆಂದು ತೋರುತ್ತದೆ. ದಾರಿಯಲ್ಲಿ ಆ ದುಡ್ಡಿನಲ್ಲೇ ಒಂದಿಷ್ಟು ತಿಂಡಿಯನ್ನೂ ತಿಂದೆವು. ಮಹಾರಾಜ ಕಾಲೇಜಿನ ಮೈದಾನ ತಲುಪಿದಾಗ ಸುಮಾರು ಎಂಟು ಗಂಟೆಯೂ ಆಗಿರಲಿಲ್ಲವೆಂದು ತೋರುತ್ತದೆ. ಫುಟ್‌ಬಾಲ್ ಮೈದಾನ ಖಾಲಿಯಾಗಿತ್ತು. ಅಲ್ಲೇ ಒಬ್ಬರನ್ನು 'ಫುಟ್‌ಬಾಲ್ ಮ್ಯಾಚ್ ಎಷ್ಟು ಗಂಟೆಗ್ರೀ' ಅಂತ ಕೇಳಿದೆವು. 'ಒಂಬತ್ತು ಗಂಟೆಗೆ' ಅಂದ ಆತ. 'ಸರಿ. ಈಗೇನು ಮಾಡುವುದು?' ಅಂತ ಯೋಚಿಸುತ್ತಿರುವಾಗ, ನನಗಿಂತ ಹೆಚ್ಚು ಮೈಸೂರು ಓಡಾಡಿದ್ದ ಗುರುದಾಸ್, 'ಅಲ್ಲಿವರ್ಗು ಕುಕ್ಕರಹಳ್ಳಿ ಕೆರೆ ಕಡೆಗೆ